ದಿನಾಂಕಃ **23-07-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಂ ಬಿ ಪಿ ವಕೀಲರಿಂದಃ</u>

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ. ನಿಮ್ಮ ಪ್ರಮಾಣ ಪತ್ರ ಇಂಗ್ಲೀಷ್ ಭಾಷೆಯಲ್ಲಿ ಇರುವುದರಿಂದ ನಿಮಗೆ ಅದರಲ್ಲಿ ಬರೆದಿರುವ ಅಂಶಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನಾನು ಕನ್ನಡದಲ್ಲಿ ತಯಾರಿಸುವಂತೆ ಹೇಳಿದ್ದೆನು ಆದರೆ ಇಂಗ್ಲೀಷ್ ಭಾಷೆಯಲ್ಲಿ ತಯಾರಿಸಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಭೀಮರಾಯರವರು ಕಾಶಪ್ಪರವರ ವಿರುದ್ಧ ದಾಖಲು ಮಾಡಿದ್ದಾರೆ. ಪ್ರತಿವಾದಿ ಕಾಶಪ್ಪರವರು ದಾವಾ ಜಮೀನು ತಮಗೆ ಸೇರಿರುತ್ತದೆ ಎಂದು ವಾದಿ ಭೀಮರಾಯರವರಿಗೆ ವಿನಾಕಾರಣ ತೊಂದರೆ ನೀಡುತ್ತಿದ್ದರಿಂದ ವಾದಿ ಈ ದಾವೆ ದಾಖಲು ಮಾಡಿದ್ದಾರೆ.

02. ದಾವಾ ಸರ್ವೆನಂ 188 ಆಗಿದ್ದು ಅದರಲ್ಲಿ ಒಟ್ಟು 5 ಎಕರೆ ಚಿಲ್ಲರೆ ಗುಂಟೆ ಜಮೀನು ಇದೆ. ಸದರಿ ಸರ್ವೆ ನಂಬರಿನಲ್ಲಿ ಒಟ್ಟು 8 ಎಕರೆ 37 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಆದರೆ ಹಿಸ್ಸಾ ನಂ.2 ರಲ್ಲಿ 5 ಎಕರೆ ಚಿಲ್ಲರೆ ಗುಂಟೆ ಜಮೀನು ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ.188 ರಲ್ಲಿ ವಾದಿ 2 ಎಕರೆ 37 ಗುಂಟೆ ಜಮೀನು ಹೊಂದಿರುತ್ತಾರೆ ಎಂದರೆ ಸರಿ. ಅದೇರೀತಿ ಪ್ರತಿವಾದಿಯೂ ಸಹ ಸದರಿ ಸರ್ವೆ ನಂಬರಿನಲ್ಲಿ 2 ಎಕರೆ 37 ಗುಂಟೆ ಜಮೀನು ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲದೇ ಮರೆಪ್ಪ ತಂದೆ ತಮ್ಮಣ್ಣರವರೂ ಸಹ 26 ಗುಂಟೆ ಜಮೀನು ಹೊಂದಿದ್ದಾರೆ ಎಂದರೆ ಸರಿ. ಅದೇರೀತಿ ಲಕ್ಷ್ಮಪ್ಪ ತಂದೆ ತಮ್ಮಣ್ಣ ರವರು 1 ಎಕರೆ 24 ಗುಂಟೆ ಜಮೀನು ಹೊಂದಿದ್ದಾರೆ ಎಂದರೆ ಸರಿ. ತಿಪ್ಪಣ್ಣ ತಂದೆ ದುಗ್ಗಪ್ಪ ಹಾಗೂ ದುಗ್ಗಪ್ಪ ತಂದೆ ತಿಪ್ಪಣ್ಣರವರೂ ಸಹ 27 ಗುಂಟೆ ಜಮೀನು ಹೊಂದಿದ್ದಾರೆ ಎಂದರೆ ಸರಿ. ಆ ಪೈಕಿ 188/2 ರ ಜಮೀನು ವಾದಿಗೆ ಸೇರಿರುತ್ತದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ188/1 ರ ಜಮೀನು ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿ.

ಸರ್ವೆ ನಂ. 188/1 ಮತ್ತು 188/2 ರ ಜಮೀನಿನ ಮಾಲೀಕರು ತಮ್ಮ ತಮ್ಮ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.

03. ಯಾದಗಿರಿ-ಹೈದರಾಬಾದ ರಸ್ತೆಯಿಂದ ಉತ್ತರಕ್ಕೆ ನಮ್ಮ ಗ್ರಾಮಕ್ಕೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಗ್ರಾಮಕ್ಕೆ ಹೋಗುವ ರಸ್ತೆ ಉತ್ತರ-ದಕ್ಷಿಣಾಭಿಮುಖವಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ನಮ್ಮ ಗ್ರಾಮಕ್ಕೆ ಹೋಗುವಾಗ ಹಳ್ಳ ಬರುತ್ತದೆ ಎಂದರೆ ಸರಿ. ಯಾದಗಿರಿ-ಹೈದಾರಾಬಾದಿನಿಂದ ಪಸ್ಪುಲ್ ಗ್ರಾಮಕ್ಕೆ ಹೋಗುವ ರಸ್ತೆ ಪಶ್ಚಿಮಕ್ಕೆ ವಾದಿಯ ಜಮೀನು ಬರುತ್ತದೆ ಎಂದರೆ ಸರಿ. ವಾದಿ ಸದರಿ ಜಮೀನಿನಲ್ಲಿ ಮನೆ ಹಾಗೂ ದನದ ಕೊಟ್ಟಿಗೆ ಹೊಂದಿರುತ್ತಾರೆ ಎಂದರೆ ಸರಿ. ಸದರಿ ಮನೆ ರಸ್ತೆಗೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ಯಾದಗಿರಿ-ಹೈದಾರಾಬಾದ ರಸ್ತೆಯಿಂದ ಪಸ್ಪುಲ್ ಗ್ರಾಮಕ್ಕೆ ಹೋಗುವ ರಸ್ತೆಯ ಎಡಬದಿಗೆ ವಾದಿಯ ಮನೆ ಇರುತ್ತದೆ ಎಂದರೆ ಸರಿ. ಅದೇರೀತಿ ಸದರಿ ರಸ್ತೆಗೆ ಹೊಂದಿಕೊಂಡು ಬಲಭಾಗಕ್ಕೆ ಅಂದರೆ ಪೂರ್ವಕ್ಕೆ ಪ್ರತಿವಾದಿಯ ಜಮೀನು ಇದೆ ಎಂದರೆ ಸಾಕ್ಷಿ ಸರಿಯಲ್ಲ, ಆತನ ಜಮೀನು ರಸ್ತೆಗೆ ಹೊಂದಿಕೊಂಡು ಇಲ್ಲ ದೂರ ಇರುತ್ತದೆ ಎಂದು ನುಡಿಯುತ್ತಾರೆ. ಹಾಗಾದರೆ ಸದರಿ ರಸ್ತೆಯ ಬಲಭಾಗಕ್ಕೆ ಯಾರ ಜಮೀನು ಇದೆ ಎಂದರೆ ಸಾಕ್ಷಿ ಎರಡೂ ಕಡೆಗೆ ವಾದಿಯ ಜಮೀನಿದ್ದು ಆತನ ಜಮೀನಿನ ನಡುವೆ ಸದರಿ ರಸ್ತೆ ಹಾದು ಹೋಗಿದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯಿಂದ ಎರಡು ಸರ್ವೆ ನಂಬರ ದೂರದಲ್ಲಿ ಪ್ರತಿವಾದಿಯ ಜಮೀನು ಇದೆ.

04. ಪ್ರತಿವಾದಿಯ ಜಮೀನಿನ ಉತ್ತರಕ್ಕೆ ಸಾಬಣ್ಣ ತಂದೆ ಮರೆಪ್ಪರವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ನಾಲಾ ಇರುತ್ತದೆ ಎಂದರೆ ಸರಿ. ಪೂರ್ವಕ್ಕೆ ಜಲ್ಲಪ್ಪ ರವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಜಮೀನಿನ ಪಶ್ಚಿಮಕ್ಕೆ ಪಸ್ಪುಲ್ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ ಸರ್ವೆ ನಂ.188 ರಲ್ಲಿ ಹಾದು ಹೋಗಿದೆ ಎಂದರೆ ಸರಿ. ಸದರಿ ರಸ್ತೆ ಹಾದು ಹೋಗಿರುವುದರಿಂದ ಸರ್ವೆ ನಂ.188 ರ ಜಮೀನು ಎರಡು ತುಂಡಾಗಿರುತ್ತದೆ ಎಂದರೆ ಸರಿ.

05. ಪ್ರತಿವಾದಿ ನಮೂನೆ 10 ರ ನಕಾಶೆ ತಯಾರಿಸಲು ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ಸರಿ, ಆದರೆ ನಕಾಶೆ ತಯಾರಿಸಿಲ್ಲ ಅರ್ಜಿ ರದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ಮೇರೆಗೆ ಭೂ ಮಾಪನ ಇಲಾಖೆಯವರು ನಮೂನೆ 10 ರ ನಕಾಶೆ ತಯಾರಿಸಿರುವ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಜಮೀನಿನ ಸ್ವಾಧೀನದ ಆಧಾರದ ಮೇಲೆ ಸದರಿ ನಕಾಶೆ ತಯಾರಿಸಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಜಮೀನು 2 ಎಕರೆ 37 ಗುಂಟೆ ಇರುತ್ತದೆ. ನಕಾಶೆ ತಯಾರಿಸಿದ ನಂತರ ವಾದಿ ಮೇಲ್ಮನವಿ ಸಲ್ಲಿಸಿದ್ದರ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

06. ಸರ್ವೆ ನಂ.188 ರ ಜಮೀನಿನಿಂದ ನನ್ನ ಜಮೀನು ಬಹಳ ದೂರದಲ್ಲಿದೆ. ನನ್ನ ಮಾವ ಅಂದರೆ ಹೆಂಡತಿಯ ತಂದೆಯ ಹೆಸರು ಸಹ ಭೀಮರಾಯ ಎಂದು ಇರುತ್ತದೆ. ಸದರಿ ನನ್ನ ಮಾವ ಭೀಮರಾಯ ಹಾಗೂ ವಾದಿಯ ಭೀಮರಾಯರವರು ದೂರದ ಅಣ್ಣ-ತಮ್ಮಂದಿರು ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಅಂದರೆ ಭೀಮರಾಯರವರ ಮಗಳು ರಾಮಮ್ಮ ರವರು ಮರಣಹೊಂದಿದ್ದಾರೆ ಎಂದರೆ ಸರಿ. ನಿಮಗೆ ಗಣಪೂರ ಭೀಮರಾಯರವರ ಪರಿಚಯ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮಾವ ಭೀಮರಾಯ ಸದರಿ ಗಣಪೂರ ಭೀಮರಾಯರವರಿಗೆ 27 ಗುಂಟೆ ಜಮೀನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗ ನನ್ನ ಮಾವನಿಗೆ ಸಂಬಂಧಿಸಿದ ಯಾವುದೇ ಜಮೀನು ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಇರುವುದಿಲ್ಲ ಎಂದರೆ ಸರಿ.

07. ನಾನು ಕಳೆದ 8 ತಿಂಗಳಿನಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೆನೆ. ನೀವು 6-7 ವರ್ಷಗಳಿಂದ ಬೆಂಗಳೂರಿನಲ್ಲಿಯೇ ವಾಸವಾಗಿರುತ್ತೀರಿ ಎಂದರೆ ಸಾಕ್ಷಿ ಆಗಾಗ ಹೋಗಿಬರುತ್ತಿದ್ದೇನು, ಈಗ 8 ತಿಂಗಳಿಂದ ಮಾತ್ರ ನಿರಂತರ ಅಲ್ಲಿಯೇ ವಾಸವಾಗಿದ್ದೆನೆ ಎಂದು ನುಡಿಯುತ್ತಾರೆ. ನಾನು ಬೆಂಗಳೂರಿನಲ್ಲಿಯೇ ವಾಸವಾಗಿದ್ದರಿಂದ ನನಗೆ ದಾವಾ ಜಮೀನಿನ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ವಾದಿ ನಂ.(ಪಿ) ಜಗದೀಶರವರು ಈ ದಿನ ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಕರೆದುಕೊಂಡು

ಬಂದಿದ್ದಾರೆ ಎಂದರೆ ಸರಿ. ನನಗೆ ಯಾವುದೇ ವಯಕ್ತಿಕ ಮಾಹಿತಿ ಇಲ್ಲದಿದ್ದರೂ ನಾನು ಸದರಿ ವಾದಿ ಹೇಳಿಕೊಟ್ಟಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ-ಪ್ರತಿವಾದಿಯರು ತಮ್ಮ ತಮ್ಮ ಜಮೀನಿನ ಮಾಲೀಕರು ಹಾಗೂ ಕಬ್ಜದಾರರಾಗಿರುತ್ತಾರೆ ಎಂದರೆ ಸರಿ.

<u>ಮರು ವಿಚಾರಣೆ ಃ</u> ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ